

# ಆಡುಗೆ ಮನೆಗೊಂದು ಅಂದದ ವಿನ್ಯಾಸ

ಸ್ವಚ್ಛ, ಅಚ್ಚುಕಟ್ಟಾದ, ಬೆರಳಿನಿಂದ ಸ್ಪರ್ಶಿಸಿದರೆ ಸಾಕು ಎಲ್ಲ ಪರಿಕರಗಳೂ ಹೊರಬರುವ, ಪರಿಸರ ಸ್ನೇಹಿ ಅಡುಗೆಮನೆ ಯಾರಿಗೆ ಬೇಡ? ಇಲ್ಲಿದೆ ಒಂದು ಹೊಸ ನೋಟ.

■ ಪೀಕೆ

ಹೊಸ ರುಚಿ ಮಾಡುವ ವಿಧಾನವನ್ನು ತಿಳಿಸಲು ಶೆಲ್ಫ್‌ನಲ್ಲಿ ನೇತಾಡುವ ಟ್ಯಾಬ್, ಮೂರು ಬಾರಿ ಕದ ಬಡಿದರೆ ತೆರೆದುಕೊಳ್ಳುವ ಪಾತ್ರೆ ತೊಳೆಯುವ ಸಾಧನ, ಮಾಡಿದ ಅಡುಗೆಯನ್ನು ಅದೇ ಸ್ಥಿತಿಯಲ್ಲಿ ಆರು ಗಂಟೆ ಕಾಪಿಟ್ಟುಕೊಳ್ಳುವ ಹಾಟ್ ಡ್ರಾಯರ್, ಕೆಟ್ಟ ವಾಸನೆಯನ್ನು ಹೊರಸೂಸುವ ರಾಸಾಯನಿಕವನ್ನೂ ಬೆಕ್ಕಿನಂತೆ ಜಪ್ಪಿಸಿ ಕುಳಿತು ಲಬಕ್ಕನೆ ನುಂಗುವ ಶುದ್ಧೀಕರಣ ಯಂತ್ರ..!

ಬೆಂಗಳೂರಿನ 'ರೈಸ್' ನವೋದ್ಯಮದ ವ್ಯವಸ್ಥಾಪಕ ನಿರ್ದೇಶಕ ಆನಂದ್ ಗುಂಜೂರ ಅವರು ಒಂದು ಉದ್ದನೆಯ ಟೇಬಲ್ ಮುಂದೆ ನಿಲ್ಲಿಸಿ 'ಇದೇ ಕಿಚನ್ ಸರ್' ಎಂದಾಗ ನಂಬಲೇ ಆಗಲಿಲ್ಲ. ಟೇಬಲ್ ಮೇಲೆ ಗೋಡೆಗೆ ಅಂಟಿಕೊಂಡಿದ್ದ ಬಿಳಿಬಣ್ಣದ ಅಲ್ಯುಮಿನಿಯಂ ಪರದೆಯನ್ನು ತೋರಿಸಿ, ಬೆರಳಿನಿಂದ ಮೇಲೆತ್ತಿ ಎಂದರು. ಬೆರಳಿನಿಂದ ಸಣ್ಣಗೆ ಅದುಮಿದಾಗ ಪರದೆ ಮೆಲ್ಲನೆ ಮೇಲಕ್ಕೆ ಏರುತ್ತಾ ಗಾಜಿನ ಹಲಗೆಗಳ ಶೆಲ್ಫ್ ಅಷ್ಟಷ್ಟೇ ಗೋಚರಿಸುತ್ತಾ ಹೊರಟಿತು. ಡಿಶ್ ಡ್ರೈಯರ್ ರ್‍ಯಾಕ್, ಫುಲ್‌ಔಟ್ ಸ್ಪೈಸ್ ಜಾರ್ (ಎತ್ತೆಂದರೆ ಅತ್ತ ಸರಿದಾಡುವ ಮಸಾಲೆ ಡಬ್ಬಿಗಳು), ಬಾಟಲ್ ರ್‍ಯಾಕ್, ವಾಷ್ ಬೇಸಿನ್‌ನತ್ತ ಬಂದು ಮೂತಿ ಹೊರಚಾಚುವ ನಲ್ಲಿ, ಬೇಳೆ ಕಾಳು ತೂಕ ಮಾಡುವ ಯಂತ್ರ... ಒಂದೊಂದಾಗಿ ಪ್ರತ್ಯಕ್ಷವಾದವು.

'ಟೇಬಲ್ ಕೆಳಗಿನ ಡ್ರಾಯರ್ ಎಳೆದು ನೋಡಿ' ಎಂದರು ಆನಂದ್. ಪಾತ್ರೆಗಳ ಗಾತ್ರಕ್ಕೆ ತಕ್ಕಂತೆ ಒಪ್ಪಓರಣವಾಗಿ ಜೋಡಿಸಲು ರೂಪಿಸಲಾದ ಡ್ರಾಯರ್‌ಗಳು ಅವು. ಮೆಕ್ಯಾನಿಕ್‌ಗಳ ಬಳಿ ಟೂಲ್ ಕಿಟ್ ಇರುವಂತೆ,